# ಸ್ವಾಮಿ ವಿವೇಕಾನಂದರೊಡನೆ ಒಂದು ಸಂಜೆ

## (ಒಂದು ಕಾಲ್ಪನಿಕ ಸಂಭಾಷಣೆ)

**ಪ್ರೊ. ಕೆ.ಬಿ.ಪ್ರಭುಪ್ರಸಾದ್**



*ಹಿಂದೆ ಆಗಿಹೋದ ಮಹಾಪುರುಷರ ಆದರ್ಶ, ಚಿಂತನೆಗಳನ್ನು ಮತ್ತೆ ಜೀವಂತಗೊಳಿಸುವುದು ಹೇಗೆ? ನಮ್ಮ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅವುಗಳ ಸಂಬಂಧವನ್ನು ಕಲ್ಪಿಸಿಕೊಂಡಾಗ. ಮೊದಲು ಮೊದಲು ಚಿಂತನೆ, ಬಳಿಕ ಭಾವನೆ, ಕೊನೆಯಲ್ಲಿ ಅನುಸಂಧಾನ— ಇವು ಮುಪ್ಪುರಿಗೊಂಡಾಗ ಅನುಭವವಾಗುತ್ತವೆ. ಈ ದಿಕ್ಕಿನಲ್ಲಿ ಸ್ವಾಮೀಜಿ ಆದರ್ಶ, ವಿಚಾರಗಳನ್ನು ಹೊಸ ಬಗೆಯಲ್ಲಿ ಕಂಡುಕೊಳ್ಳುವ ಪ್ರಯತ್ನ ಇಲ್ಲಿನದು. ಲೇಖಕರು ನಿವೃತ್ತ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.*

೧೯೬೩ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ಶತಮಾನೋತ್ಸವಕ್ಕೆ ಭಾರತದಾದ್ಯಂತ ಮಹಾಪ್ರಮಾಣದಲ್ಲಿ ಸಿದ್ಧತೆಗಳಾದವು. ಯುವಜನರ ಸಂಘಟನೆ, ಸೇವಾಯೋಜನೆ, ಮರುಜೀವ ಪಡೆದವು. ಇದು ನಮ್ಮ ರಾಷ್ಟ್ರದ ಜನತೆ ಕೃತಜ್ಞತೆಯಿಂದ ಮಾಡಬೇಕಾದ ಕರ್ತವ್ಯ. ರಾಷ್ಟ್ರದ ಸ್ವಾತಂತ್ರ್ಯೋದಯದಿಂದ ಹಿಡಿದು ಇದುವರೆಗೂ ಆಗಿರುವ ಎಲ್ಲ ಪುನರುತ್ಥಾನದ ಕಾರ್ಯಗಳಿಗೂ ಸ್ವಾಮೀಜಿಯವರಿಗೂ ನಿಕಟವಾದ ಸಂಬಂಧ ಇದೆ. ನವಭಾರತ ನಿರ್ಮಾಣಕಾರ್ಯ ಆರಂಭವಾದುದೇ ಸ್ವಾಮೀಜಿಯವರ ತೂರ್ಯವಾಣಿಯಿಂದ. ರಾಷ್ಟ್ರೀಯ ಪ್ರಜ್ಞೆಯನ್ನು ಎಚ್ಚರಗೊಳಿಸಿ ಬಹುಕಾಲದ ನಿದ್ರೆಯಲ್ಲಿ , ದಾಸ್ಯದಲ್ಲಿ ಇದ್ದ ದೇಶವನ್ನು ಸ್ವಾಮೀಜಿ ಬಡಿದೆಬ್ಬಿಸಿದರು. ಮಾತೃಭೂಮಿ ಭಾರತದ ಹಿರಿಯ ಸಂಸ್ಕೃತಿಯ ಪರಂಪರೆಯನ್ನು ನೆನಪುಮಾಡಿಕೊಟ್ಟರು. ದೇಶದ ಯುವಜನರಲ್ಲಿ ನವಶಕ್ತಿಯ ಸಂಚಾರವಾಗುವಂತೆ ಸ್ಫೂರ್ತಿಯುತ ಲೇಖನ ಬರೆದರು. ಜ್ವಾಲಾಸದೃಶ ಉಪನ್ಯಾಸಗಳನ್ನು ಮಾಡಿದರು. ಸಿಡಿಲನ್ನು ನಾಚಿಸುವಂತೆ ಗರ್ಜಿಸಿದರು; ಮಿಂಚನ್ನು ನಾಚಿಸುವಂತೆ ಉಜ್ವಲವಾದ ಪ್ರಕಾಶವನ್ನು ಬೀರಿದರು. ಭಾರತದ ಅಂತಃಸತ್ವ ಅಧ್ಯಾತ್ಮ ಎಂದು ತೋರಿಸಿ ಅದರ ಸುಭದ್ರವಾದ ತಳಹದಿಯ ಮೇಲೆ ಸತ್ವಯುತವಾದ ಆಧುನಿಕ ಸಮಾಜವನ್ನು ಕಟ್ಟುವಂತೆ ಆದೇಶವಿತ್ತರು. ಜಗತ್ತಿಗೆ ಭಾರತದ ಮಹತ್ತಾದ ಕಾಣಿಕೆ ನಿತ್ಯ ನೂತನವಾದ ಉಪನಿಷತ್ಪ್ರಣೀತವಾದ ಸನಾತನ ಧರ್ಮ ಎಂದು ಘೋಷಿಸಿದರು. ಇದೇ ವಿಶ್ವಧರ್ಮ. ಮಾನವ ಕಲ್ಯಾಣವಾದರೂ ಇದರಿಂದಲೇ ಸಾಧ್ಯ ಎಂದು ಖಚಿತವಾಗಿ ಅಧಿಕಾರವಾಣಿಯಿಂದ ಹೇಳಿದರು. ಹಳೆಯ ಅರ್ಥಹೀನವಾದ ಸಂಪ್ರದಾಯಗಳನ್ನೂ, ಕುರುಡು ನಂಬಿಕೆಗಳನ್ನೂ ನಿರ್ದಾಕ್ಷಿಣ್ಯವಾಗಿ ಖಂಡಿಸಿ ಅವುಗಳನ್ನು ಬಿಟ್ಟುಬಿಡಬೇಕು ಎಂದರು. ವಾಸ್ತವತೆ, ವೈಚಾರಿಕತೆ, ವೈಜ್ಞಾನಿಕ ಮನೋಭಾವಗಳ ನೆಲೆಗಟ್ಟಿನ ಮೇಲೆ ಹೊಸ ಜೀವನ ಸಿದ್ಧಾಂತವನ್ನು ಬೋಧಿಸಿದರು. ಅನುಷ್ಠಾನ ವೇದಾಂತ ಎಂದು ಅದನ್ನು ಕರೆದರು. ಇಂಥ ಮಹಾಪುರುಷನ ಜೀವನದ ಬಗ್ಗೆ, ಸಂದೇಶದ ಬಗ್ಗೆ ಕುತೂಹಲ, ತಿಳಿಯಬೇಕೆಂಬ ಹಂಬಲ ಈಗ ಹೆಚ್ಚಾಗಿರುವುದು ಸಹಜವಾಗಿದೆ. ಇದುವರೆಗೆ ನಿರ್ಲಕ್ಷ್ಯಕ್ಕೊಳಗಾದ ಜನಸಾಮಾನ್ಯರಿಗೆ ಇದನ್ನು ತಲುಪಿಸಬೇಕು.

ನಾವು ಭಾರತೀಯರು. ಉತ್ಸವ ಪ್ರಿಯರು. ಯಾರ ಶತಮಾನೋತ್ಸವಗಳಿಗೇ ಆಗಲಿ ಭರ್ಜರಿಯಾದ ಏರ್ಪಾಟು ಮಾಡುತ್ತೇವೆ, (ಒಂದು ಸಾಧಾರಣ ಮದುವೆಯನ್ನೇ ಇಷ್ಟು ವಿಜೃಂಭಣೆಯಿಂದ ಮಾಡುವಾಗ) ಭಾಷಣಗಳನ್ನು ಚೆನ್ನಾಗಿ ಮಾಡುತ್ತೇವೆ. ಸಮಾರಂಭದ ಮುಖ್ಯಮೂರ್ತಿಗಳಾದ ಮಹಾಪುರುಷರ ವಿಗ್ರಹಗಳನ್ನು ಕಡೆಸಿ ಊರಿನ ಮುಖ್ಯವೃತ್ತಗಳಲ್ಲಿ ನಿಲ್ಲಿಸಿ ಹೂಹಾರಗಳಲ್ಲಿ ಮುಳುಗಿಸುತ್ತೇವೆ. ಅನಂತರ ನಮ್ಮ ಕರ್ತವ್ಯ ಮುಗಿಯಿತೆಂದು ಆ ಮಹನೀಯರನ್ನು ಸಂಪೂರ್ಣವಾಗಿ ಮರೆತು ನಮ್ಮ ಎಂದಿನ ಜೀವನವನ್ನು ನಡೆಸುತ್ತೇವೆ, ಅವರ ಸಂದೇಶಕ್ಕೂ ನಮ್ಮ ನಿತ್ಯದ ಬಾಳಿಗೂ ಅರ್ಥಾರ್ಥ ಸಂಬಂಧವಿಲ್ಲ ಎಂದು.

ವಿವೇಕಾನಂದರ ಶತಮಾನೋತ್ಸವದ ಸಿದ್ಧತೆ ನಡೆದಿರುವಾಗಲೆ ತಂಪಾಗಿದ್ದ ಉತ್ತರದ ಹಿಮಾಲಯ ಬಿಸಿಯಾಯಿತು. ಶುಭ್ರ ಹಿಮಾವಕುಂಠನ ರಕ್ತಸಿಂಚಿತವಾಯಿತು. ಮಿತ್ರರು ಎಂದು ತಿಳಿದವರ ಹೃದಯವು ದ್ರೋಹದಿಂದ ಕೂಡಿದ ಶತ್ರುವಿನ ಹೃದಯ ಎಂದು ತಿಳಿಯಿತು. ಇಡೀ ನಾಡು ಸ್ವರಕ್ಷಣೆಯ ಯುದ್ಧದಲ್ಲಿ ನಿರತವಾಗಬೇಕಾಯಿತು.

ಈ ಪರಿಸ್ಥಿತಿ ಸ್ವಾಮೀಜಿಯ ಸಂದೇಶಕ್ಕೆ ಪರೀಕ್ಷೆಯಾಗಿ ಸಂದರ್ಭಕ್ಕೆ ವಿಶೇಷತೆಯನ್ನು ಔಚಿತ್ಯವನ್ನೂ ತಂದುಕೊಟ್ಟಿದೆ. ಏಕೆಂದರೆ ಆ ಸಂದೇಶ, ಶಕ್ತಿಯ ಸಂದೇಶ. ಕ್ಷಾತ್ರಬಲ, ಆತ್ಮಬಲ, ಅವಿಚಲಿತವಾದ ನಿರ್ಧಾರದ ಇಚ್ಛಾಬಲ — ಇವೇ ಆ ಸಂದೇಶದ ಸಾಮಗ್ರಿ.

ಉತ್ತರ ಕೊಟ್ಟಿದ್ದಾಯಿತು. ಪಾಠ ಕಲಿತದ್ದಾಯಿತು. ಇದೇ ಆಲೋಚನೆ ಮಾಡುತ್ತ ಮಂಪರು-ಅರೆನಿದ್ರಾವಸ್ಥೆಗಿಳಿದೆ. ನೂರು ಬಗೆಯ ಆಲೋಚನೆಗಳು ತಲೆತುಂಬಿದ್ದವು. ಸ್ವಾಮೀಜಿ ಇದ್ದಿದ್ದರೆ ಅವರನ್ನು ಕೇಳುವ ಅನೇಕ ಪ್ರಶ್ನೆಗಳು. ಇಂದಿನ ಸಮಸ್ಯೆಗಳಿಗೆ ಅವರು ಸೂಚಿಸಬಹುದಾದ ಪರಿಹಾರಗಳೇನು — ಎಂಬಿವೇ ಸುಳಿದಾಡುವಾಗ ಅಲ್ಲೇ ಸಮೀಪದಲ್ಲೆ ಭವ್ಯವಾದ ಆಕೃತಿಯ ಸ್ವಾಮೀಜಿ ಕುಳಿತದ್ದು ಕಂಡಿತು. ಕಿಟಕಿಯಿಂದ ಒಳ ಬಂದ ಬೆಳಕು ಅವರ ಮೇಲೆ ಬಿದ್ದಿತು.

ಅವರ ಮುಂದೆ ಹೋಗಿನಿಂತೆ. ಅವರು ನನ್ನನ್ನು ನೋಡುತ್ತಿದ್ದಂತೆ ಅವರ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದೆ. ಅವರು ಮುಗುಳುನಗುತ್ತಾ ''ಬಾ, ಕುಳಿತುಕೊ, ಏನೋ ಗಾಢವಾದ ಚಿಂತೆಯಲ್ಲಿರುವಂತೆ ನಿನ್ನ ಮುಖ ಸೂಚಿಸುತ್ತಿದೆ. ಏನು ಸಮಾಚಾರ?'' ಎಂದು ಕೇಳಿದರು.

''ಸ್ವಾಮೀಜಿ, ನನಗೆ ನಮ್ಮ ದೇಶದ್ದೇ ಚಿಂತೆಯಾಗಿದೆ. ಗುರು ಮಹಾರಾಜರು, ಶಾರದಾಮಾತೆ, ಜಾತಿಧರ್ಮಗಳ ಮೇಲು-ಕೀಳು ಭಾವನೆಗಳನ್ನು ತೊಡೆದು ಹಾಕಿ ಸರ್ವಧರ್ಮ ಸಮನ್ವಯವನ್ನು ಪ್ರಯೋಗ ಮಾಡಿ ತೋರಿಸಿಕೊಟ್ಟರು. ಕ್ರೈಸ್ತ, ಇಸ್ಲಾಂ, ಶೈವ, ವೈಷ್ಣವ, ಶಾಕ್ತ ಮುಂತಾದ ಪಂಥಗಳಿರುವ ಹಿಂದೂ ಇತ್ಯಾದಿ ಮತಗಳೆಲ್ಲ ನಿತ್ಯ ಹಾಗೂ ಪರಮ ಸತ್ಯವೆಂಬ ಗುರಿಯನ್ನು ಸೇರುವ ವಿವಿಧ ಪಥಗಳು ಎಂದರು. ನೋಡಿದರೆ ಪ್ರತಿಯೊಬ್ಬ ವ್ಯಕ್ತಿಯದೂ ತನ್ನದೇ ಆದ ವಿಶಿಷ್ಟ ಪಥ ಎಂದು ತಮ್ಮ ಸ್ವಂತ ಸಾಧನೆ ಮತ್ತು ಅನುಭವಗಳಿಂದ ತೋರಿಸಿಕೊಟ್ಟರು. ಶ್ರೀಶಾರದಾಮಾತೆ ತಮ್ಮ ಬದುಕನ್ನೆ ಉದಾಹರಣೆಯಾಗಿ ಮುಂದಿಟ್ಟರು. ನೀವು ಈ ದಿವ್ಯ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೂ ಮುಟ್ಟಿಸಿದಿರಿ. ನಿಮ್ಮ ಸ್ಫೂರ್ತಿಯುತ ಮಾತುಗಳಿಂದ ಯುವಜನರನ್ನು ಎಚ್ಚರಗೊಳಿಸಿ ಆತ್ಮಸಾಧನೆ, ಜೀವ, ಈಶ-ಶಿವಸೇವೆ ಎರಡನ್ನೂ ಮಾಡುವಂತೆ ಹುರಿದುಂಬಿಸಿದಿರಿ. ಭಾರತೀಯರ ಮೌಢ್ಯ-ದಾರಿದ್ರ್ಯಗಳ ಮೇಲೆ, ನಿಷ್ಕ್ರಿಯತೆ ಮೇಲೆ ಗದಾಪ್ರಹಾರ ಮಾಡಿ ಕಣ್ಣು ತೆರೆಸಿದಿರಿ. ಆದರೆ ನಮ್ಮ ಜನರ ದೌರ್ಬಲ್ಯ-ಸೋಮಾರಿತನ ಹೋಗುವುದಿರಲಿ, ಕಡಿಮೆ ಸಹ ಆಗಲಿಲ್ಲ.

''ಇವರನ್ನು ತಿದ್ದುವುದೇ ಅಸಾಧ್ಯವಾಗಿದೆ. ನಿಸ್ವಾರ್ಥ ಸೇವೆ, ತ್ಯಾಗಗಳಿಂದ ಕೂಡಿದ ಆಧ್ಯಾತ್ಮಿಕ ಸಂಸ್ಕೃತಿ ಎಲ್ಲಿ ಮರೆಯಾಗಿದೆ? ಇದೇ ಯೋಚನೆ ಆಗಿದೆ. ಇವೆಲ್ಲಕ್ಕೂ ಪರಿಹಾರವೇನು ಸ್ವಾಮೀಜಿ? ಭಾರತೀಯರಾದ ನಾವು ಆಡಂಬರ ಪ್ರಿಯರಾಗಿ ಬಿಟ್ಟಿದ್ದೇವೆ. ಬುದ್ಧ, ಬಸವ, ಗಾಂಧಿ ಅಂಬೇಡ್ಕರ್ ದಿನಾಚರಣೆಗಳನ್ನು ಅದ್ದೂರಿಯಾಗಿ ಮಾಡುತ್ತೇವೆ. ಊರು, ಬೀದಿ, ವೃತ್ತಗಳಿಗೆ ಅವರ ಹೆಸರನ್ನಿಡುತ್ತೇವೆ. ಅವರ ಚಿತ್ರಪಟಗಳಿಗೆ, ವೃತ್ತಗಳಲ್ಲಿ ನಿಲ್ಲಿಸಿದ ಅವರ ಶಿಲಾಮೂರ್ತಿಗಳಿಗೆ ಹಾರ ಹಾಕಿ ದೊಡ್ಡ ದೊಡ್ಡ ಮೆರವಣಿಗೆ ಮಾಡುತ್ತೇವೆ. ನಂತರ ಅವರ ಬದುಕು ಸಂದೇಶಗಳಿಗೂ ನಮಗೂ ಸಂಬಂಧವೇ ಇಲ್ಲದ ಹಾಗೆ ಇದ್ದು ಬಿಡುತ್ತೇವೆ. ಇದಕ್ಕೆ ಪರಿಹಾರವೇನು? ನೀವಾದರೂ ಸೂಚಿಸಿರಿ'' ಎಂದೆ. ಅದಕ್ಕೆ ಅವರು ನಕ್ಕುಬಿಟ್ಟರು. ''ನೀನು ಹೇಳುವುದೆಲ್ಲ ಸರಿ. ನಿನ್ನ ಚಿಂತೆ, ಮಾನಸಿಕ ಗೊಂದಲ ಎಲ್ಲ ನನಗರ್ಥವಾಗುತ್ತದೆ.''

''ಏಕೆ ಹೀಗಾಗಿದೆ ಸ್ವಾಮೀಜಿ'' ಎಂದು ಆರ್ತತೆಯಿಂದ ಕೇಳಿದೆ. ''ಮನುಷ್ಯ ಮಹಾಸ್ವಾರ್ಥಿಯಾಗಿ ಲೌಕಿಕ ವ್ಯವಹಾರಗಳಲ್ಲಿ ಮುಳುಗಿ ತನ್ನ ಸ್ವರೂಪವನ್ನು-ಆಂತರಿಕ ದೈವತ್ವ ವನ್ನು-ಮರೆತಿರುವುದೇ ಮುಖ್ಯ ಕಾರಣ. ಈಗ ಎಲ್ಲರ ಗುರಿ ಕೇವಲ ಹಣ ಸಂಪಾದನೆಯೊಂದೇ. ಹಣವೇ ಮುಖ್ಯ , ಹಣದಿಂದಲೇ ಸುಖ-ಸಂತೋಷ ಎಂಬ ಭ್ರಮೆಯಲ್ಲಿ ಸಿಲುಕಿ ಹಣದ ಹಿಂದೆ ಓಡುತ್ತಿದ್ದಾರೆ. ಹೆಚ್ಚು ಹೆಚ್ಚು ಹಣ ಗಳಿಸಬೇಕು, ಕೂಡಿಡಬೇಕು ಎಂಬ ಹುಚ್ಚು ಹಿಡಿದಿದೆ. ಹಣಗಳಿಸುವುದಕ್ಕಾಗಿಯೇ ಪ್ರತಿಭಾವಂತರೂ, ತುಂಬಾ ಬುದ್ಧಿವಂತರೂ ಅಮೆರಿಕಾಗೆ ಹೋಗಿ ನೆಲೆಸುತ್ತಿದ್ದಾರೆ. ಡಾಲರ್ ಬೆಲೆ ಹೆಚ್ಚಾಗಿರುವುದರಿಂದ ಅಲ್ಲಿನ ಸಂಪಾದನೆಯಿಂದ ಬಹು ಬೇಗ ಕೋಟ್ಯಾಧೀಶ್ವರರಾಗಬಹುದು ಎಂದು. ಮೊದಲನೆ ಪೀಳಿಗೆಯವರು ತಮ್ಮ ಬೇರುಗಳನ್ನು ನೆನೆದು ಭಾರತಕ್ಕೆ ಹಿಂದಿರುಗಿದರೂ ಅವರ ಮಕ್ಕಳು ಅಲ್ಲಿನ ವಾತಾವರಣದಲ್ಲೆ ಬೆಳೆದು ಅದಕ್ಕೆ ಹೊಂದಿಕೊಂಡು ತಮ್ಮ ಮೂಲ ಸಂಸ್ಕೃತಿಯನ್ನು ಕಳೆದುಕೊಂಡು, ಮಾತೃಭಾಷೆಯೂ ತಿಳಿಯದೆ ಅಮೆರಿಕನ್ ಪ್ರಜೆಗಳಾಗುವುದರಲ್ಲೆ ಸುಖಿಸುತ್ತಾರೆ. ಹೆಮ್ಮೆ ಪಡುತ್ತಾರೆ.

''ಇದು ಒಂದು ಕಡೆ ಆದರೆ ಸೃಷ್ಟಿಯಲ್ಲಿ ತಾನೇ ಶ್ರೇಷ್ಠ ಎಂಬ ಅಹಂಕಾರದಿಂದ ಮನುಷ್ಯ ಪ್ರಕೃತಿಯನ್ನು ಶೋಷಣೆ ಮಾಡುತ್ತಿದ್ದಾನೆ. ತನ್ನ ಹೊಣೆಗಾರಿಕೆಯನ್ನು ಮರೆತಿದ್ದಾನೆ. ಅರ್ಥಹೀನವಾದ ಅಂಧ ಸಂಪ್ರದಾಯಗಳೇ ಧಾರ್ಮಿಕತೆ ಎಂದು ತಪ್ಪಾಗಿ ಭಾವಿಸಿದ್ದಾನೆ. ಮನುಷ್ಯತ್ವದ ಬದಲು ಮಡಿ ಮೈಲಿಗೆಗಳೇ

ಹೆಚ್ಚಾಗಿವೆ. ಮೂಢನಂಬಿಕೆಗಳೇ ಹೆಚ್ಚಾಗಿವೆ. ನಾನಂತೂ ಪ್ರತಿಯೊಬ್ಬ ಮಾನವ ಜೀವಿಗೂ ತನ್ನ ದೈವತ್ವದ ಅರಿವನ್ನು ಮೂಡಿಸುವವರೆಗೂ, ನೊಂದವರ ಕಣ್ಣೀರನ್ನೊರಸಿ, ಎಲ್ಲರೂ ಪ್ರೀತಿ, ಅನುಕಂಪ, ಸೇವೆಗಳಲ್ಲಿ ನಿರತರಾಗುವವರೆಗೂ ವಿರಮಿಸುವುದಿಲ್ಲ.

''ಒಂದು ದೇಶದ ಬಲ ಎಂದರೆ, ಆಸ್ತಿ ಎಂದರೆ, ಆ ದೇಶದ ಯುವಶಕ್ತಿ. ಭಾರತದ ಭರವಸೆ ಎಂದರೆ ಈ ಯುವಕ-ಯುವತಿಯರು. ಭವಿಷ್ಯವನ್ನು ರೂಪಿಸುವವರು. ಈ ಯುವಜನರಿಗೂ ನಮ್ಮ ಪ್ರಾಚೀನ ಸಂಸ್ಕೃತಿಯಾಗಲಿ, ಅಧ್ಯಾತ್ಮದ ತಿಳಿವಾಗಲಿ ಇಲ್ಲವೇ ಇಲ್ಲ. ನಮ್ಮ ಭವ್ಯ ಭಾರತದ ಇತಿಹಾಸವೂ ತಿಳಿದಿಲ್ಲ. ಇತ್ತ ವೈಚಾರಿಕ, ವೈಜ್ಞಾನಿಕ ಮನೋಭಾವವನ್ನಾಗಲಿ, ಧನಾತ್ಮಕ ಮನೋಧರ್ಮವನ್ನಾಗಲಿ ಅವರು ಬೆಳೆಸಿಕೊಂಡಿಲ್ಲ. ಇನ್ನೊಂದು ವಿಚಾರ:

''ಒಂದು ದೇಶವನ್ನು ಗೆಲ್ಲಲು ಯುದ್ಧವನ್ನೇ ಮಾಡಬೇಕೆಂದಿಲ್ಲ. ಅಲ್ಲಿನ ಯುವಜನರಿಗೆ ಡ್ರಗ್ಸ್ (ಮಾದಕವಸ್ತುಗಳ) ವ್ಯಸನವನ್ನು ಅಂಟಿಸಿದರೆ ಸಾಕು. ಇಡೀ ದೇಶ ದುರ್ಬಲವಾಗುತ್ತದೆ. ಪತನ ಹೊಂದುತ್ತದೆ. ಈಗಿನ ಯುವಜನರಂತೂ ಮದ್ಯಪಾನ, ಧೂಮಪಾನ ಮಾಡುವುದೇ ಉಚ್ಚ ನಾಗರಿಕ ಲಕ್ಷಣ ಎಂದು ತಪ್ಪು ಭಾವಿಸಿದ್ದಾರೆ. ತಪ್ಪೋ ಸರಿಯೊ ನಿರರ್ಗಳವಾಗಿ ಇಂಗ್ಲಿಷ್ ಮಾತನಾಡುವುದೇ ಶಿಕ್ಷಣ ಎಂದುಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಭಾಷೆಯ ಬಗ್ಗೆ, ರಾಷ್ಟ್ರದ ಬಗ್ಗೆ ಅಭಿಮಾನವಿಲ್ಲ. ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಗಳೇ ಇಲ್ಲ. ಶೀಲ, ಶಿಸ್ತು ಸಂಯಮಗಳೇ ಇಲ್ಲವಾಗಿವೆ. ಗುರಿಯೆಂಬುದೇ ಇಲ್ಲ. ವಿಲಾಸ ಜೀವನ, ವಿಕೃತವಾದ ಭೋಗ ಜೀವನ ಇವರನ್ನು ಆಕರ್ಷಿಸುತ್ತಿದೆ.

''ಭಾರತದ ದುಃಸ್ಥಿತಿಗೆ ಜನಸಾಮಾನ್ಯರನ್ನು ನಿರ್ಲಕ್ಷಿಸಿರುವುದೇ ಕಾರಣ ಎಂದು ಹೇಳುತ್ತಿದ್ದೆ. ಈಗ ಯುವಕರನ್ನು ನಿರ್ಲಕ್ಷಿಸಿರುವುದು ಹೇಳಬೇಕಾಗಿದೆ. ಇದು ಇನ್ನೂ ಹೆಚ್ಚು ಅಪಾಯಕಾರಿ ಸ್ಥಿತಿಗೆ ಭಾರತವನ್ನು ಒಡ್ಡಿದೆ,'' ಹೀಗೆ ಹೇಳುತ್ತ ಸ್ವಾಮೀಜಿ ಭಾವಪರವಶರಾದರು.

''ಇದಕ್ಕೆಲ್ಲ ಪರಿಹಾರವೇನು, ಸ್ವಾಮೀಜಿ?'' ಎಂದು ಕೇಳಿದೆ. ಅವರು,''ಶಿಕ್ಷಣ! ಸರಿಯಾದ ಶಿಕ್ಷಣ. ಮಾನವೀಯ ಮೌಲ್ಯ ಶಿಕ್ಷಣ, ಶಿಕ್ಷಣವೇ ಎಲ್ಲಕ್ಕೂ ಔಷಧಿ. ನಮ್ಮ ಮಕ್ಕಳಿಗೆ ಅವರು ಪ್ರಾಥಮಿಕ ಶಾಲೆಯಲ್ಲಿರುವಾಗಲೆ ನಮ್ಮ ಇತಿಹಾಸದ ತಿಳಿವಳಿಕೆಯನ್ನು ನೀಡಬೇಕು. ರಾಮಾಯಣ, ಮಹಾಭಾರತ- ಉಪನಿಷತ್ತುಗಳ ಪರಿಚಯ ಮಾಡಬೇಕು — ಕಥೆಗಳ ಮೂಲಕ. ಭೂಮವಾದುದಕ್ಕೆ ಆಸೆಪಡಬೇಕೇ ವಿನಾ ಅಲ್ಪಕ್ಕಲ್ಲ. ಹಿಂದೆ ನಮ್ಮವರು ಹೇಗೆ ಬಾಳಿದರು, ಹಿರಿಯ ಆದರ್ಶಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟರು. ನಿಜವಾದ ಶ್ರೀಮಂತಿಕೆ, ಚಿನ್ನ-ಹಣ, ಆಸ್ತಿ-ಪಾಸ್ತಿಗಳಿಂದ ಬರುವುದಲ್ಲ. ನೊಂದವರ ಕಣ್ಣೀರೊರೆಸುವ, ದುರ್ಬಲರ ಸೇವೆ ಮಾಡುವ ಹೃದಯ ಶ್ರೀಮಂತಿಕೆಯೆ ನಿಜವಾದ ಶ್ರೀಮಂತಿಕೆ. ಸೇವೆ ಹಾಗೂ ತ್ಯಾಗ ಮನೋಭಾವ ಭಾರತೀಯರಲ್ಲಿ ರಕ್ತಗತವಾಗಿದೆ. ''ಸರಳವಾದ ಬದುಕು-ಉನ್ನತ ಚಿಂತನೆ'' (Simple living and high thinking) ಸೂತ್ರ ನಮ್ಮ ಪ್ರಾಚೀನ ಋಷಿ-ಮುನಿಗಳ ಹಾಗೂ ಗ್ರಾಮೀಣ ಪ್ರಾಜ್ಞ ಹಿರಿಯರ ಬದುಕಿನ ರೀತಿಯಾಗಿತ್ತು ....''

ಕೇಳುತ್ತಾ ಕೇಳುತ್ತಾ ನನ್ನ ಕಣ್ಣು ಹನಿಗೂಡಿದವು. ಸ್ವಾಮೀಜಿ ಮುಂದುವರಿದು, ''ಪ್ರಾಚೀನದ ಮಾತೇಕೆ, ಈ ಕಾಲದಲ್ಲೇ ಅಂತಹ ಜೀವನವನ್ನು ನಡೆಸಿದ ಗುರುವರ್ಯ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಶಾರದಾಮಾತೆಯವರಿಗಿಂತ ಉಜ್ವಲವಾದ ಉದಾಹರಣೆ ಬೇಕೆ?''

ಹೀಗೆ ಹೇಳುತ್ತಾ ಸ್ವಾಮೀಜಿಯವರ ಕಣ್ಣು ತೇಜೋಮಯವಾಗಿ ಹೊಳೆದವು. ನನ್ನ ಕಣ್ಣಲ್ಲೂ ನೀರು ! ಮನಸ್ಸು ಎಷ್ಟೋ ಹಗುರವಾಯಿತು.

''ಜನ ಬದಲಾಗುವುದಕ್ಕೆ ಕಾಯುವುದೇಕೆ? ಈ ಪರಿವರ್ತನೆ ಮೊದಲು ನಿನ್ನಿಂದಲೇ ಆಗಲಿ. ಕೇವಲ ಕನಸು ಕಾಣುವುದಲ್ಲ, ಹಾಗೆ ಬದುಕಬೇಕು.''

ಹೇಗೋ ಸ್ವಾಮೀಜಿ ಸದಾ ನಮ್ಮೊಂದಿಗಿದ್ದಾರೆ. ತಪ್ಪುಹಾದಿ ಹಿಡಿದು ದಿಕ್ಕು ತೋಚದೆ ಮತ್ತಿನಲ್ಲಿ ಕಂಗಾಲಾಗಿರುವ ಯುವಜನರನ್ನು ಎಚ್ಚರಿಸುತ್ತಾರೆ. ಭಾರತವನ್ನು ಬೆಳಕಿನೆಡೆ, ಆತ್ಮಶಕ್ತಿಯೆಡೆಗೆ ನಡೆಸುತ್ತಾರೆ ಎಂದು ಸಂತೋಷಿಸುತ್ತಿದ್ದ ಹಾಗೆ, ಸ್ವಾಮೀಜಿ ''ನೀನಿನ್ನೂ ಚಿಕ್ಕವನು. ನಿನ್ನಲ್ಲಿ ಇಷ್ಟು ಅನುಕಂಪೆ ಮೂಡಿದೆಯೆಂದರೆ ಅದು ಶುಭಸೂಚನೆ,'' ಎಂದರು.

ಅವರ ಒಂದೊಂದು ಮಾತೂ ಮನನ ಯೋಗ್ಯವಾಗಿದೆ, ಅರ್ಥಪೂರ್ಣವಾಗಿದೆ. ನಾನು ಕಣ್ಮುಚ್ಚಿ ಕೆಲವು ಕ್ಷಣ ಅಂತರ್ಮುಖನಾದೆ. ಅಲ್ಲೊಂದು ದಿಗಂತ, ಹೊಂಬಣ್ಣದ ಬೆಳಕು ಪಸರಿಸುತ್ತಿದೆ.

ಕಣ್ಣನ್ನು ಮೆಲ್ಲನೆ ತೆರೆದೆ. ಸ್ವಾಮೀಜಿ ಅಲ್ಲಿರಲಿಲ್ಲ. ಬರೀ ಬೆಳಕು, ಪ್ರಭೆ ಅವರಿದ್ದಲ್ಲಿ ಆವರಿಸಿತ್ತು.

ಸ್ವಾಮೀಜಿಯೊಡನೆ ಒಂದು ಸಂಜೆ ಎಂದೆ. ಸಂಜೆ ಹೋಗಿ ಅರುಣೋದಯವಾಗಿತ್ತು.

''ನಾಡಿನ ಪುಣ್ಯದ ಪೂರ್ವದಿಗಂತದಿ
ಹೊಸ ಅರುಣೋದಯ ಮೂಡುತಿದೆ . . .. ..

— ಕುವೆಂಪು ಅವರ ಈ ಹಾಡು ಗಾಳಿಯಲ್ಲಿ ತೇಲಿ ಬರುತ್ತಿತ್ತು.

❖